O.S.No. 445/2016 D W - 1

ದಿನಾಂಕ 14-03-2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ.R.C. ವಕೀಲರಿಂದ :

ರಾಜಮ್ಮ ಮತ್ತು ಶಿವಮ್ಮ ಎಂಬುವವರು ನನ್ನ ಮೇಲೆ ಹಾಗೂ ಅವರ ತಮ್ಮ ಮಲ್ಲೇಶ ಹಾಗೂ ಚಂದ್ರಶೇಖರ್ ಮೇಲೆ ಹಾಕಿದ್ದಾರೆ. ನಾನು ಡಿಪ್ಲೋಮೋ ವ್ಯಾಸಂಗ ಮಾಡಿದ್ದೇನೆ. ಈ ದಾವೆಯನ್ನು ವಿಭಾಗ ಕೋರಿ ಹಾಕಿದ್ದಾರೆ. ಸರ್ವೇ ನಂಬರ್ 8/1 , 8/3 ಸ್ವತ್ತುಗಳಿಗೆ ದಾವೆ ಹಾಕಿದ್ದಾರೆ. 8/1 ರಲ್ಲಿ 15 ಗುಂಟೆಗೆ , 8/3 ರಲ್ಲಿ 17 ಗುಂಟೆಗೆ ದಾವೆ ಹಾಕಿದ್ದಾರೆ. ದಾವಾ ಸ್ವತ್ತುಗಳು ಮೂಲತಃ ಮಲ್ಲಯ್ಯ ನವರ ಮಗ ಮಲ್ಲವೀರಯ್ಯನವರಿಗೆ ಸೇರಿದ್ದವು ಎಂದರೆ ಸರಿ . ಮಲ್ಲವೀರಯ್ಯ ನವರಿಗೆ ಸದರಿ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು. ಈ ದಾವೆಯನ್ನು ಹಾಕಿರುವ 1 ನೇ ವಾದಿ ನಿಂಗಮ್ಮ ಮಲ್ಲವೀರಯ್ಯನವರ ಹೆಂಡತಿ ಹಾಗೂ 2 ಮತ್ತು 3 ನೇ ವಾದಿಯವರು ಅವರ ಮಕ್ಕಳು ಎಂದರೆ ಸರಿ . 1 ಮತ್ತು 2 ನೇ ಪ್ರತಿವಾದಿ ಯವರು ಮಲ್ಲವೀರಯ್ಯ ರವರ ಮಕ್ಕಳು ಎಂದರೆ ಸರಿ . ದಾವಾ ಸ್ವತ್ತುಗಳ ಖಾತೆ ಮೂಲತಃ ಮಲ್ಲವೀರಯ್ಯ ನವರ ಹೆಸರಿನಲ್ಲಿ ಇತ್ತು ಎಂದರೆ ಸರಿ . 10.01.2016 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ . ಅವರ ಮರಣಾನಂತರ ದಾವಾ ಸ್ವತ್ತುಗಳು ವಾದಿಗಳು ಹಾಗೂ 1 ಮತ್ತು 2 ನೇ ಪ್ರತಿವಾದಿಯವರ ಜಂಟಿ ಸ್ವಾಧೀನದಲ್ಲಿ ಇತ್ತು ಎಂದರೆ ಸರಿಯಲ್ಲ. ಮಲ್ಲವೀರಯ್ಯನವರ ಮರಣಾನಂತರ ವಾದಿಗಳು , 1 ಮತ್ತು 2 ನೇ ಪ್ರತಿವಾದಿಗಳ ನಡುವೆ ವಿಭಾಗ ಆಗಿದ್ದಕ್ಕೆ ನಾನು ಯಾವುದೇ ದಾಖಲೆ ನೀಡಿಲ್ಲ. ಮಲ್ಲ ವೀರಯ್ಯನವರ ಮರಣಾನಂತರ ಅವರ ಹೆಂಡತಿ ಮಕ್ಕಳ ನಡುವೆ ಯಾವುದೇ ಭಾಗ ಆಗಿರಲಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು 8/1, 8/3 ರ ಸ್ವತ್ತುಗಳನ್ನು 2012 ರಲ್ಲಿ 2 ನೇ ಪ್ರತಿವಾದಿಯಿಂದ ಖರೀದಿಸಿದ್ದೇನೆ. ದಿನಾಂಕ ನೆನಪಿಲ್ಲ. ಆಗಸ್ಟ್ , ಸೆಪ್ಟೆಂಬರ್ ನಲ್ಲಿ ಖರೀದಿಸಿರಬಹುದು. 1 ಗುಂಟೆಗೆ 14 ಸಾವಿರ ರೂ ನಂತೆ ಖರೀದಿಸಿದ್ದೇನೆ. ಆ ಬಗ್ಗೆ ಕ್ರಯ ಪತ್ರದಲ್ಲಿ ಹೇಳಿಲ್ಲ. ಕ್ರಯ ಪತ್ರದಲ್ಲಿ 75 ಸಾವಿರ ಕ್ಕೆ ಖರೀದಿಸಿರುವುದಾಗಿ ನಮೂದಿಸಿರಬಹುದು. ಸದರಿ

ಕ್ರಯ ಪತ್ರಕ್ಕೆ ವಾದಿಯರು ಸಹಿ ಹಾಕಿರುವುದಿಲ್ಲ. ದಾವಾ ಸ್ವತ್ತು 2 ನೇ ಪ್ರತಿವಾದಿಯವರ ಪಿತ್ರಾರ್ಜಿತ ಸ್ವತ್ತು ಎಂದು ನನಗೆ ಗೊತ್ತಿತ್ತು. ಆಗ ವಾದಿಯರ ಸಹಿ ಪಡೆಯಬೇಕು ಎಂದು ಯೋಚಿಸಿದ್ದೀರಾ ಎಂದರೆ ಸಾಕ್ಷಿ 2 ನೇ ಪ್ರತಿವಾದಿ ಸದರಿ ಸ್ವತ್ತುಗಳು ತನಗೆ ವಿಭಾಗದಲ್ಲಿ ಬಂದಿರುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಕ್ರಯ ಆಗುವ ಮುಂಚೆ ನಾನು 2 ನೇ ಪ್ರತಿವಾದಿಯಿಂದ ವಿಭಾಗ ಪತ್ರ ಪಡೆದಿಲ್ಲ. ದಾವಾ ಸ್ವತ್ತು 2 ನೇ ಪ್ರತಿವಾದಿಗೆ ವಿಭಾಗದಲ್ಲಿ ಬಂದಿಲ್ಲ, ನಾನು ಮತ್ತು 2 ನೇ ಪ್ರತಿವಾದಿ ಸುಳ್ಳು ರೆವಿನ್ಯೂ ದಾಖಲೆಗಳನ್ನು ಸೃಷ್ಟಿಸಿಕೊಂಡು , ವಾದಿಯರಿಗೆ ಮೋಸ ಮಾಡಲು ಕ್ರಯ ಪತ್ರ ಮಾಡಿದ್ದೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳ ಅಕ್ಕಪಕ್ಕದಲ್ಲಿ ನನಗೆ ಸೇರಿದ 1 ಮುಕ್ಕಾಲು ಬೇರೆ ಸ್ವತ್ತು ಸಹ ಇದೆ. ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಬೇರೆ ಸ್ವತ್ತುಗಳು ಸಹ ಇರುವ ಕಾರಣ ದಾವಾ ಸ್ವತ್ತನ್ನು ಲಪಟಾಯಿಸಲು ಕ್ರಯ ಪತ್ರ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಅಣ್ಣ. 1 ನೇ ಪ್ರತಿವಾದಿಯ ಸಹಿ ಪಡೆಯುವಾಗ ವಾದಿಯವರ ಸಹಿ ಪಡೆಯ ಬೇಕು ಎಂದು ನನಗೆ ಅನ್ನಿಸಲಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ಇಬ್ಬರೂ ನನ್ನ ಬಳಿ ಬಂದಿದ್ದ ಕಾರಣ ನಾನು 1 ನೇ ಪ್ರತಿವಾದಿಯ ಸಹಿ ಕ್ರಯ ಪತ್ರದಲ್ಲಿ ಪಡೆದಿದ್ದೆ. ನಾನು 1 ಮತ್ತು 2 ನೇ ಪ್ರತಿವಾದಿಯರ ಜೊತೆ ಸೇರಿಕೊಂಡು ವಾದಿಯವರಿಗೆ ಮೋಸ ಮಾಡಲು ಕ್ರಯ ಪತ್ರವನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮಲ್ಲವೀರಯ್ಯನವರ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು , ಅವುಗಳ ಸಂಬಂಧ ಯಾವುದೇ ಭಾಗ ಆಗದೇ ಇರುವ ಕಾರಣ ವಾದಿಗಳಿಗೂ ಸಹ ಸದರಿ ಸ್ವತ್ತುಗಳಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಒಬ್ಬನಿಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಕ್ರಯಕ್ಕೆ ಪಡೆಯುವಾಗ ಮೌಖಿಕವಾಗಿ ವಾದಿಯವರ ಬಳಿ ಕೇಳಿದ್ದೆ . ಮುಂದುವರೆದು ಸಾಕ್ಷಿ ಆಗ ವಾದಿಯವರು ವಿಭಾಗವಾಗಿದೆ, ನೀವು ಕ್ರಯಕ್ಕೆ ಪಡೆಯಬಹುದು ಎಂದು ಹೇಳಿದ್ದರು. ಜನವರಿ, ಪೆಬ್ರವರಿ 2012 ರಲ್ಲಿ ಅವರ ಬಳಿ ವಿಚಾರಿಸಿದ್ದೆ. ನಾನು ಆ ಬಗ್ಗೆ ಹೆಣ್ಣು ಮಕ್ಕಳನ್ನು ಕೇಳಿಲ್ಲ, ಅವರ ತಾಯಿ ಅಂದರೆ 1 ನೇ ವಾದಿಯನ್ನು ಮಾತ್ರ ಕೇಳಿದ್ದೆ ಎಂದು ನುಡಿಯುತ್ತಾರೆ. ನಾನು 1 ನೇ ವಾದಿಗೆ ಆ ಬಗ್ಗೆ ಕೇಳಿದಾಗ ಬೇರೆ ಯಾರು ಇದ್ದರು ಎಂದು ನನಗೆ ನೆನಪಿಲ್ಲ. ನಿಡಿ-2 ರಂತೆ ವಾದಿಗಳು ಮತ್ತು 1 ಮತ್ತು 2 ನೇ

ಪ್ರತಿವಾದಿಯರು ಜೋಗಪ್ಪನವರಿಗೆ ಬೇರೆ ಸ್ವತ್ತನ್ನು ಮಾರಾಟ ಮಾಡಿದ್ದು ಆ ಬಗ್ಗೆ ಅದನ್ನು ಹಾಜರುಪಡಿಸಿದ್ದೇನೆ. ಜೋಗಪ್ಪನವರಿಗೆ ನಿಡಿ-2 ರಂತೆ ಸ್ವತ್ತನ್ನು ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಯರು ಒಟ್ಟಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ . ಸದರಿಯವರು ನಿಡಿ--2 ರಲ್ಲಿನ ಸ್ವತ್ತನ್ನು ಮಲ್ಲವೀರಯ್ಯನವರ ಕುಟುಂಬದವರಾದ ನಾವು ಮಾರಾಟ ಮಾಡುತ್ತಿದ್ದೇವೆ ಎಂದು ಹೇಳಿ ಮಾರಾಟ ಮಾಡಿದ ಸ್ವತ್ತು ಎಂದರೆ ಸರಿ . 2012 ರಲ್ಲಿ ನಾನು ದಾವಾ ಸ್ವತ್ತುಗಳನ್ನು ಖರೀದಿಸಿದಾಗ ಅವು ವಾದಿಯರ ಹಾಗೂ 1 ಮತ್ತು 2 ನೇ ಪ್ರತಿವಾದಿಯರ ಜಂಟಿ ಸ್ವಾಧೀನದಲ್ಲಿ ಇದ್ದವು ಎಂದರೆ ಸರಿಯಲ್ಲ. ನನಗೆ ಸೇರಿದ ಬೇರೆ ಸ್ವತ್ತಿನಲ್ಲಿನ ಪೋಟೋ ತೆಗೆದು ದಾವಾ ಸ್ವತ್ತು ಎಂದು ಹಾಜರುಪಡಿಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತು ವಾದಿಯವರಿಗೆ ಸೇರಿದ್ದು ನನಗೆ ಸಂಪೂರ್ಣ ಮಾಲೀಕತ್ವ ಬರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಗಿಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ